**ಓ.ಎಸ್. ನಂಃ 68/2019**

**ಪಿ.ಡಬ್ಲು – 1**

**ಸಾಕ್ಷಿಯನ್ನು ದಿನಾಂಕಃ 21.11.2022 ರಂದು ಪುನಃ ಕರೆಯಿಸಿ,ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 8 ಮತ್ತು 9 ರವರ ಪರ ವಕೀಲರು, ಶ್ರೀ. ಆಯ್.ಎಮ್.ಕೆ ರವರಿಂದಃ**

6. ನನ್ನ ತಂದೆಗೆ 4 ಜನ ಮಕ್ಕಳು ಎಂದರೆ ಸರಿ. ನನ್ನ ಅಕ್ಕನ ಹೆಸರು ಬಾಲಮ್ಮ @ ಬಾಳವ್ವ. ನನ್ನ ಮತ್ತು ನಿಂಗಪ್ಪನ ಮದುವೆ ಕಂಠಿಬಸವೇಶ್ವರ ದೇವಸ್ಥಾನದಲ್ಲಿ ನಡೆಯಿತು. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ಸದರಿ ಪೋಟೋದಲ್ಲಿ ಕಾಣುವ ಮದುವೆ ಹೆಣ್ಣು ಮತ್ತು ಗಂಡು ನಿಂಗಪ್ಪ ಮತ್ತು ಆತನ ಹೆಂಡತಿ. 8 ನೇ ಪ್ರತಿವಾದಿ ಸದರಿ ನಿಂಗಪ್ಪನ ಹೆಂಡತಿ ಎಂದರೆ ಸರಿ. ಸದರಿಯವರ ಹೆಸರು ಶಾಂತವ್ವ ಎಂದರೆ ಸರಿ. ಸದರಿ ಶಾಂತವ್ವ ನನ್ನ ಅಕ್ಕನ ಬಾಲಮ್ಮನ ಮಗಳು ಎಂದರೆ ಸರಿ. ನನ್ನ ತಮ್ಮ ಅಕ್ಕನ ಮಗಳನ್ನು ಮದುವೆಯಾಗಿದ್ದ ಎಂದರೆ ಸರಿ. ಸದರಿ ಮದುವೆಯನ್ನು ನಾವೇ ಮಾಡಿಕೊಂಡಿದ್ದೇವೆ. ಸಾಕ್ಷಿಯು ನಿಮ್ಮ ಮದುವೆಯಾವಾಗ ಆಯಿತೆಂದರೆ ಈ ಸಂಬಂಧ ಮದುವೆ ಲಗ್ನಪತ್ರಿಕೆ ಇದೆ ಎಂದು ಒಂದು ಲಗ್ನಪತ್ರಿಕೆಯನ್ನು ಹಾಜರಪಡಿಸಿದ್ದು ಸದರಿ ಲಗ್ನಪತ್ರಿಕೆಯು ಶಿಥಿಲವಾಗಿರುವುದರಿಂದ ಸದರಿ ದಾಖಲೆಯನ್ನು ನಿಪಿ.7 ಎಂದು ಗುರುತಿಸಲಾಯಿತು. ಸದರಿ ಮದುವೆ ದಿನಾಂಕ 28-06-1982 ರಂದು ಆಗಿದೆ. ಸದರಿ ದಾಖಲೆ ಶಿಥಿಲವಾಗಿರುವುದರಿಂದ ಅದರ ಝುರಾಕ್ಸ ಪ್ರತಿಯನ್ನು ತೆಗೆದುಕೊಂಡು ಮೂಲ ಪ್ರತಿಯನ್ನು ನಿಪಿ.7 ಎಂದು ಝುರಾಕ್ಸ ಪ್ರತಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು.

7. ನನ್ನ ಸಹೋದರ ನಿಂಗಪ್ಪನಿಗೆ ಪ್ರತಿವಾದಿ 10 ಮತ್ತು 11 ಸಂಬಂಧವಿಲ್ಲ. ಪ್ರತಿವಾದಿ 11 ನನ್ನ ಸಹೋದರ ನಿಂಗಪ್ಪನ ಮಗನಲ್ಲ. ಪ್ರತಿವಾದಿ 10 ನನ್ನ ತಮ್ಮನ ಹೆಂಡತಿಯಲ್ಲ. ನನ್ನ ಅಕ್ಕ ಬಾಲಮ್ಮರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿಯವರು ಪಕ್ಷಗಾರರಲ್ಲದ ಕಾರಣ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರ ನಿಂಗಪ್ಪ ಕೆ.ಎಸ್.ಆರ್.ಟಿ.ಸಿ ಯಲ್ಲಿ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ನನ್ನ ಸಹೋದರನಿಗೆ ಜಮೀನುಗಳಿಂದ ಮತ್ತು ತನ್ನ ವೃತ್ತಿಯಿಂದ ಸಾಕಷ್ಟು ಆದಾಯವಿತ್ತು ಎಂದರೆ ಸರಿ. ನಾನು ಮತ್ತು ನನ್ನ ಸಹೋದರರು ಜಂಟಿಯಾಗಿ ಒಟ್ಟು ಕುಟುಂಬದಲ್ಲಿದ್ದೆವು ಎಂದರೆ ಸರಿ. ಒಟ್ಟು ಕುಟುಂಬದ ಆದಾಯದಿಂದ ಪ್ಲಾಟ ನಂ.365, 366 ಎರಡು ಪ್ಲಾಟಗಳನ್ನು ನಾನು ಮತ್ತು ನನ್ನ ಸಹೋದರರು ಖರೀದಿಸಿದ್ದೇವೆಂದರೆ ಸರಿಯಲ್ಲ. ನಾನು ಸ್ವಂತ ಖರೀದಿಸಿದ್ದೇನೆಂದು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ 8 ಮತ್ತು 9 ರವರಿಗೆ ಹಿಸ್ಸಾ ಕೊಡಬೇಕಾಗುತ್ತದೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

8. ದಾವಾ ಸ್ವತ್ತುಗಳು ಸಾಮುಹಿಕ ಕಬ್ಜೆಯಲ್ಲಿವೆ ಎಂದರೆ ಸರಿ. ಪ್ರತಿವಾದಿ 10 ಮತ್ತು 11 ರವರು ದಾವಾ ಸ್ವತ್ತುಗಳಲ್ಲಿ ಸಾಮೂಹಿಕ ಕಬ್ಜೆಯಲ್ಲಿ ಇಲ್ಲ ಎಂದರೆ ಸರಿ. ಪ್ರತಿವಾದಿ 10 ಮತ್ತು 11 ರವರು ಪ್ರತಿವಾದಿ 8 ಮತ್ತು 9 ರವರಿಗೆ ತಿಳಿಯದ ಹಾಗೆ ಓ.ಎಸ್ 7/2019 ರಲ್ಲಿ ಡಿಕ್ರಿ ಪಡೆದಿದ್ದಾರೆಂದರೆ ಸರಿ. ಸದರಿ ಡಿಕ್ರಿಯನ್ನು ಪ್ರಶ್ನಿಸಿ ಉಚ್ಛನ್ಯಾಯಾಲಯದಲ್ಲಿ ಎಮ್.ಎಫ್.ಎ. ನಂ.10178827/2020 ಸಲ್ಲಿಸಿದ್ದಾರೆಂದರೆ ಸರಿ. ಸದರಿ ಮೇಲ್ಮನವಿ ಚಾಲ್ತಿಯಲ್ಲಿದೆ ಎಂದರೆ ಸರಿ. ಪ್ಲಾಟಗಳಲ್ಲಿ ಭಾಗಕೊಡಬೇಕಾಗುತ್ತದೆಂದು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಹೋದರಿಗೂ ಸಹ ಎಲ್ಲ ಆಸ್ತಿಗಳಲ್ಲಿ ಭಾಗಾಂಶವಿದೆ ಎಂದರೆ ಸರಿಯಲ್ಲ.

<u>ಓ.ಎಸ್. ನಂಃ 68/2019</u>

**ಪಿ.ಡಬ್ಲು – 1**

**<u>ಪಾಟೀ ಸವಾಲುಃ ಪ್ರತಿವಾದಿ 1 ರಿಂದ 7 ರವರ ಪರ ಶ್ರೀ ಎಸ್.ಎಮ್.ಎಸ್ ವಕೀಲರಿಂದ</u>**

9. ನನ್ನ ತಂದೆಯ ಸಹೋದರರು ಈಶ್ವರಪ್ಪ, ಯಮನೂರಪ್ಪ, ಭೀಮಪ್ಪ ಮತ್ತು ಹನಮಪ್ಪ ಎಂದರೆ ಸರಿ. ಡ ನಂಬರ 1605 ರಲ್ಲಿ ನನ್ನ ತಂದೆಗೆ 11 ಎಕರೆ 36 ಗುಂಟೆ ಬಂದಿದೆ ಎಂದರೆ ಸರಿ. ಸರ್ವೆ ನಂ.145 ರ 7 ಎಕರೆ 9 ಗುಂಟೆಯಲ್ಲಿ ನನ್ನ ತಂದೆ ಮತ್ತು ಅವರ ಸಹೋದರರ ಹೆಸರು ಜಂಟಿಯಾಗಿದೆ ಎಂದರೆ ಸರಿ. ಪ್ಲಾಟ ನಂ.25 ನನ್ನ ಅಣ್ಣ ವೀರಭದ್ರಪ್ಪನ ಹೆಸರಿನಲ್ಲಿ ಖರೀದಿಯಾಗಿದೆ ಎಂದರೆ ಸರಿ. ಪ್ಲಾಟ ನಂ.26 ನ್ನು ನನ್ನ ಮಗನ ಖರೀದಿಸಿದ್ದೇನೆ ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ.

10. ನನ್ನ ತಂದೆಯ ಸಹೋದರರು ಪೋತಿಯಾಗಿದ್ದಾರೆಂದರೆ ಸರಿ. ಅವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸರ್ವೆ ನಂ.145 ನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(**ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.**)

ಓ. ಹೇ. ಕೇ. ಸರಿ ಅದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.